ದಿನಾಂಕಃ 15-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು - ಶ್ರೀ ಎ.ಜಿ.ಕೆ ವಕೀಲರಿಂದ ಪಿರ್ಯಾಧಿ ಪರ

ನಾನು ಅಬಕಾರಿ ಇಲಾಖೆಯಲ್ಲಿ ಎಸ್.ಡಿ .ಎ ಆಗಿ ನಿವೃತ್ತಿ ಹೊಂದಿದ್ದೆ. ನಿವೃತ್ತಿ ಹೊಂದಿ 5 ತಿಂಗಳು ಅಗಿರುತ್ತದೆ. ಪ್ರಕರಣ ದಾಖಲಾಗಿರುವ ಬಗ್ಗೆ ನನಗೆ ಮಾಹಿತಿ ಇತ್ತು. ನನ್ನ ವಿರುದ್ಧ ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಚೆಕ್ ಪ್ರಕರಣಗಳು ಇರುತ್ತದೆ.

ಶಶಿ ರೇಖಾರವರಿಂದ ನಾನು ಹಣ ಪಡೆದುಕೊಂಡಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಶಶಿರೇಖಾರವರಿಗೆ ಮೂರು ಚೆಕ್ ಗಳನ್ನು ನೀಡಿದ್ದೆ. ಸದರಿ ಚೆಕ್‌ಗಳ ಸಂಖ್ಯೆ ನನಗೆ ನೆನಪು ಇರುವುದಿಲ್ಲ. ಹಣ ಪಾವತಿಸಿದ ನಂತರ ಚೆಕ್ ನ್ನು ವಾಪಾಸು ನೀಡುವಂತೆ ಶಶಿರೇಖಾರವರನ್ನು ಕೇಳಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೊಟೀಸು ಬಂದ ನಂತರ ಶಶಿರೇಖಾರವರ ಮನೆ ಬಳಿ ಹೋಗಿ ಕೇಳಿರುತ್ತೇನೆ ಎಂದು ಹೇಳುತ್ತಾರೆ. ಚೆಕ್‌ನ್ನು ಮುಂದಿನ ದಿನದಲ್ಲಿ ಕೊಡುತ್ತೇನೆನಂದು ನನ್ನನ್ನು ವಾಪಾಸು ಕಳುಹಿಸಿದ್ದರು. ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ಯಾವುದೇ ದೂರು ನೀಡಿರುವುದಿಲ್ಲ.

ನಾನು ಎಸ್ .ಬಿ ಐ ನ ಚೆಕ್ ಗಳನ್ನು ಅವರಿಗೆ ನೀಡಿದ್ದೆ. ಚೆಕ್ಕಿಗೆ ಸ್ಟಾಫ್ ಪೇಮೆಂಟ್ ಮಾಡುವಂತೆ ಯಾವುದೇ ಬ್ಯಾಂಕಿಗೆ ಮಾಹಿತಿ ನೀಡಿರುವುದಿಲ್ಲ. ನೋಟೀ ತಲುಪಿದ ನಂತರ ನಾನು ಪಿರ್ಯಾಧಿದಾರರು ಬಳಿ ಹೋಗಿ ಹಣವನ್ನು ವಾಪಾಸು ನೀಡುತ್ತೇನೆಂದು ಹೇಳಿರುತ್ತೇನೆ ಎಂದರೆ ಸುಳ್ಳು. ನಾನು ಸಮಯಾವಕಾಶ ಕೇಳಿದ ಕಾರಣ ಪಿರ್ಯಾದುದಾರರು ಸಮಾಯಾವಕಾಶವನ್ನು ನೀಡಿದ್ದು ನಂತರ ನಾನು ಹಣ ಪಾವತಿಸದ ಕಾರಣ ಪಿರ್ಯಾದುದಾರರು ನನ್ನ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸುಳ್ಳು.

ಪಿರ್ಯಾಧಿದಾರರರಿಗೆ ನಾನು ಸಾಲದ ಭಾದ್ಯತೆಗಾಗಿ ನಿಪಿ-1 ಚೆಕ್ ನ್ನು ನೀಡಿರುತ್ತೇನೆ ಎಂದರೆ ಸುಳ್ಳು. ಚೆಕ್ ನ್ನು ಬ್ಯಾಂಕಿಗೆ ನಗದೀಕರಣಕ್ಕೆ ಸಲ್ಲಿಸಿದಾಗ ನನ್ನ ಬ್ಯಾಂಕ್ ಖಾತೆಯಲ್ಲಿ ಯಾವುದೇ ಹಣ ಇರಲಿಲ್ಲ. ನಾನು ಪಿರ್ಯಾಧಿದಾರರಿಗೆ ರೂ ರೂ.250000-00 ಹಣ ನೀಡಲು ಬಾಧ್ಯಸ್ಥಳಾಗಿರುತ್ತೇನೆ ಎಂದರೆ ಸುಳ್ಳು. ಹಣ ಪಾವತಿಯನ್ನು ತಪ್ಪಿಸುವ ಸಲುವಾಗಿ ಶಶಿರೇಖರವರ ಕಟ್ಟು ಕಲ್ಪನೆ ಮಾಡಿ ಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ನನ್ನ ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸಾಗರ